ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.: 45/2025

.........................................................................

CW 07
PW 08

| | | |
|---|---|---|
| ಹೆಸರು | : | ಚಂದ್ರಭೂಷಣ ಝಾ |
| ತಂದೆಯ ಹೆಸರು | : | ಜಿಷ್ಣು ಪ್ರಸಾದ ಝಾ |
| ವಯಸ್ಸು | : | 57 ವರ್ಷ |
| ಉದ್ಯೋಗ | : | ಕ್ಲರ್ಕ |
| ವಾಸಸ್ಥಳ | : | ಲಾಕ್ ರಾಜ್, ಜಾರ್ಖಂಡ, ಬಿಹಾರ. |

ದಿನಾಂಕ 15-06-2026 ರಂದು ಸಾಕ್ಷಿಗೆ ಸತ್ಯಪ್ರತಿಜ್ಞೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ಚಾಸಾ 1 ರವರು ನನ್ನ ಮಗ. ಆತನು ಎಸ್ ಡಿ ಎಮ್ ಆಸ್ಪತ್ರೆಯಲ್ಲಿ ವೈದ್ಯಕೀಯ ಓದಲು 2023 ರಲ್ಲಿ ಸೇರಿಕೊಂಡಿದ್ದನು. ಆತನ ಬಳಿ ಟಿ ವಿ ಎಸ್ ಮೋಟಾರ ಕೆಎ-25-ಎಚ್ ಜೆ-2647 ಬೈಕ್ ಇತ್ತು.

ದಿನಾಂಕ 31-10-2024 ರಂದು ಆತನು ಹಳಿಯಾಳ ದಾಂಡೇಲಿ ರಸ್ತೆಯಲ್ಲಿ ಹೋಗುತ್ತಿದ್ದಾಗ ಕೆಸರೋಳ್ಳಿ ಕ್ರಾಸ್ ಹತ್ತಿರ ಆತನ ಬೈಕಿಗೆ ಮತ್ತು ಕೆ ಎಸ್ ಆರ್ ಟಿ ಸಿ ಬಸ್ ಗೆ ಅಪಘಾತವಾಗಿತ್ತು. ನನ್ನ ಮಗನಿಗೆ ಬಲಗಾಲಿಗೆ ಮತ್ತು ತಲೆಗೆ ಹೊಟ್ಟೆಯ ಭಾಗಕ್ಕೆ ಎದೆಗೆ ಭಾರಿ ಗಾಯವಾಗಿತ್ತು. ಆತನನ್ನು ಎಸ್ ಡಿ ಎಮ್ ಆಸ್ಪತ್ರೆ ಧಾರವಾಡದಲ್ಲಿ ದಾಖಲಾಗಿದ್ದನು. ಅಪಘಾತವಾದ 2 ದಿನಗಳು ತರುವಾಯ ನಾನು ಚಾಸಾ 1 ರವರನ್ನು ನೋಡಲು ಬಂದಿದ್ದೆ. ಅಪಘಾತದ ವಿಷಯವನ್ನು ನನಗೆ ಕಾಲೀಜಿನ ಪ್ರಾಂಶುಪಾಲರು ತಿಳಿಸಿದ್ದರು.

ಅಪಘಾತದಿಂದ ನನ್ನ ಮಗನ ಬೈಕನ್ನು ಹಳಿಯಾಳ ಪೊಲೀಸ ಠಾಣೆಯಲ್ಲಿ ಇಡಲಾಗಿತ್ತು. ಸದರಿ ವಾಹನ ನನ್ನ ಮಗನ ಹೆಸರಿನಲ್ಲಿ ಇತ್ತು, ಆತನು ನನಗೆ ಅಧಿಕಾರ ಪತ್ರ ನೀಡದ ಮೇರೆಗೆ ನಾನು 21-11-2024 ರಂದು ಹಳಿಯಾಳ ಪೊಲೀಸ ಠಾಣೆಯಲ್ಲಿ ಬಾಂಡ್ ಪತ್ರವನ್ನು ಬರೆದುಕೊಂಡು ಸದರಿ ವಾಹನವನ್ನು ಬಿಡಿಸಿಕೊಂಡಿರುತ್ತೇನೆ. ಸದರಿ ಬಾಂಡ್ ಪತ್ರವನ್ನು ಸಾಕ್ಷಿ

ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 16 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ 16 ಬಿ ಎಂದು** ಗುರುತಿಸಲಾಯಿತು. ಸದರಿ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ನಿಪಿ 7 ಅನ್ನು ತೋರಿಸಲಾಗಿ ಅದರಲ್ಲಿ ಕಾಣುವ ತಮ್ಮ ಮಗನದ್ದು ಎಂದು ನುಡಿಯುತ್ತಾರೆ. ನನ್ನ ಮಗನು ಬರೆದು ಅಧಿಕಾರ ಪತ್ರವನ್ನು ಸಾಕ್ಷಿ ನೋಡಿ ಗುರುತಿಸುತ್ತೇನೆ ಸದರಿ ಅಧಿಕಾರ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು **ನಿಪಿ 21 ಎಂದು,** ಸಾಕ್ಷಿಯ ಸಹಿಗಳನ್ನು **ನಿಪಿ 21 ಎ ಮತ್ತು ಬಿ ಎಂದು** ಗುರುತಿಸಲಾಯಿತು.

**ಪಾಟೀ ಸವಾಲು** : ಆರೋಪಿತರ ಪರ ಶ್ರೀ ಎಸ್ ಎಲ್ ಎಸ್ ವಕೀಲರಿಂದ.

ಅಪಘಾತದ ಕುರಿತು ವಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ನಿಮ್ಮ ಮಗ ಬೈಕನಿಂದ ಬಿದ್ದು ಅಪಘಾತ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.